ವ್ಯಾವಹಾರಿಕ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ
ನ್ಯಾಯಾಲಯ ಮೂಡಬಿದಿರೆ

ಸಿಸಿ ನಂ. 1777/2021,
ಚಾಸಾ- 1, ಫ್ರಾಸಾ -1

| | |
|---|---|
| ಹೆಸರು | ಜಯಂತಿ ಪಿ ಸುವರ್ಣಾ |
| ಗಂಡನ ಹೆಸರು | ಪದ್ಮನಾಭ ಸುವರ್ಣಾ |
| ವಯಸ್ಸು | 64 ವರ್ಷ |
| ಕೆಲಸ | ಕೃಷಿ |
| ವಾಸ | ನಿಡ್ಡೋಡಿ ಗ್ರಾಮ |
| ಪ್ರಮಾಣೀಕರಿಸಿದ ದಿನಾಂಕ | 23-09-2025 |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ

1. ಚಾಸಾ-2 ನನ್ನ ಗಂಡ . ಚಾಸಾ-3 ನನ್ನ ಸೊಸೆ . ಚಾಸಾ-4 ಮತ್ತು ಚಾಸಾ-5 ರವರು ನನ್ನ ಸಂಬಂಧಿಕರು . ಆರೋಪಿ ಗೊತ್ತು . ನಮ್ಮ ಜಮೀನಿನ ಧಣಿಯವರ ಸಂಬಂಧಿ . 5 ವರ್ಷಗಳ ಹಿಂದೆ ನಾನು ನಮ್ಮ ತೋಟದಲ್ಲಿ ದನವನ್ನು ಮೇಯಲು ಕಟ್ಟಿ ಹಿಂದಿರುಗಿ ಬರುತ್ತಿರುವಾಗ ಆರೋಪಿ ಬೇಲಿಯಲ್ಲಿ ನಿಂತಿದ್ದ . ಆಗ ನನ್ನನ್ನು ಉದ್ದೇಶಿಸಿ , ಬೇವಾರ್ಸಿ , ಬೋಳಿ ಮುಂಡೆ , ನಿನ್ನನ್ನು ರೇಪ್ ಮಾಡದೆ ಬಿಡುವುದಿಲ್ಲ . ನಿನ್ನ ಜೊತೆ ಎಷ್ಟು ಜನ ಇದ್ದಾರೆ ನೋಡುತ್ತೀನಿ , ಬಾರಿ ದೂರನ್ನು ನೀಡುತ್ತೀಯಾ ಎಂದು ಅವಾಚ್ಯ ಶಬ್ದಗಳಿಂದ ಬೈದನು , ನನ್ನ ಹತ್ತಿರ ಬಂದು ನನ್ನ ಎದೆಗೆ ಕೈ ಹಾಕಿದನು , ನನ್ನ ರವಿಕೆಯನ್ನು ಹರಿದನು , ನನ್ನ ಬೆನ್ನಿನ ಹಿಂದೆ ಕತ್ತಿಯಿಂದ ಹೊಡೆದನು . ಆಗ ಜೊರಾಗಿ ಬೊಬ್ಬೆ ಹಾಕಿರುತ್ತೇನೆ , ಆಗ ನನ್ನ ಗಂಡ ಮತ್ತು ನನ್ನ ಸೊಸೆ ಅಲ್ಲಿಗೆ ಬಂದರು . ನನ್ನ ಗಂಡನನ್ನು ಕುರಿತು ಆರೋಪಿ ನಿನ್ನನ್ನು ಬಿಡುವುದಿಲ್ಲ ಎಂದು ಅವಾಚ್ಯ ಶಬ್ದಗಳಿಂದ ಬೈದು , ಜೈಲಿಗೆ ನಿನ್ನನ್ನು ಹಾಕದೆ ಬಿಡುವುದಿಲ್ಲ ಎಂದು ಹೇಳಿರುತ್ತಾನೆ . ನನ್ನನ್ನು ಕಾಲಿನಿಂದ ಆರೋಪಿ ದೂಡಿರುತ್ತಾನೆ .

ಇದರ ಪರಿಣಾಮ ನನಗೆ ಎದೆ ನೋವು ಬಂದಿರುತ್ತದೆ . ನಾನು ಮೂಡಬಿದ್ರೆಯು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ . ನನ್ನ  ಎದೆ ನೋವು ಜೋರಾದ ಕಾರಣ ನಾನು ಸುರತ್ಕಲ್ ನ ಅಥರ್ವಾ ಆಸ್ಪತ್ರೆಗೆ ದಾಖಲಾಗಿರುತ್ತೇನೆ . ಪೊಲೀಸರು ಆಸ್ಪತ್ರೆ ಗೆ ಬಂದು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ . ಸಾಕ್ಷಿ ಸದರಿ ಹೇಳಿಕೆಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-1 ಎಂದು , ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು .

ಈ ಘಟನೆಗೆ ಸಂಬಂಧಿಸಿದಂತೆ ನಾನು  ಮಂಗಳೂರು  ನ್ಯಾಯಾಧೀಶರ ಮುಂದೆ ನಾನು ನನ್ನ ಹೇಳಿಕೆಯನ್ನು ನೀಡಿರುತ್ತೇನೆ . ಸದರಿ ಹೇಳಿಕೆಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಹೇಳಿಕೆಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.  ನಾನು ಪೊಲೀಸರಿಗೆ ಯಾವುದೇ ಮರುಹೇಳಿಕೆ ನೀಡಿರುವುದಿಲ್ಲ .

*(ಈ ಹಂತದಲ್ಲಿ ಸಾಕ್ಷಿಯನ್ನು  ಭಾಗಶಃ  ಪ್ರತಿಕೂಲ ಸಾಕ್ಷಿ ಎಂದು ವಿಚಾರಣೆ ಮಾಡಲು  ಮಾನ್ಯ ಸ ಸ ಅ ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)*

<u>ಪಾಟೀ ಸವಾಲುಃ  ಮಾನ್ಯ ಸ ಸ ಅ ರವರಿಂದಃ</u>

ದಿಃ 28-02-2020 ರಂದು ಘಟನೆ ನಡೆದಿರುತ್ತದೆ ಎಂದರೆ ಸರಿ . ದಿಃ 07-03-2020 ರಂದು ಆರೋಪಿಯು ತಕ್ಷೀರು ಎಸಗುವ ಸಮಯ ನನ್ನ ರವಿಕೆಯನ್ನು ಹರಿದು ಹಾಕಿದ್ದು , ಅದನ್ನು ಮನೆಯ ಬಳಿ ಇರುವ ತೋಡಿಗೆ ಬಿಸಾಡಿರುವ ಬಗ್ಗೆ ನನ್ನ ಮರುಹೇಳಿಕೆಯಲ್ಲಿ ಹೇಳಿರುತ್ತೇನೆ ಎಂದರೆ ಸರಿ .

(ಪಾಟೀಸವಾಲುಃ ಆರೋಪಿ ಪರ ವಕೀಲರು ಪಾಟೀಸವಾಲಿಗಾಗಿ ಸಮಯಾವಕಾಶ ಕೋರಿದ್ದು , ಸಮಯಾವಕಾಶ ನೀಡಿ ಮುಂದೂಡಲಾಯಿತು . )

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-

ವ್ಯ ನ್ಯಾಮತ್ತು ಪ್ರ.ದ.ನ್ಯಾದಂ.
ಮೂಡಬಿದಿರೆ